# ಕರ್ನಾಟಕ ವಿಧಾನ ಪರಿಷತ್ತು

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : **303 (434)**

ಸದಸ್ಯರ ಹೆಸರು : **ಡಾ. ಧನಂಜಯ ಸರ್ಜಿ (ಪದವೀಧರರ ಕ್ಷೇತ್ರ)**

ಉತ್ತರಿಸಬೇಕಾದ ದಿನಾಂಕ : 10-03-2025

ಉತ್ತರಿಸುವವರು : ಮಾನ್ಯ ಅರಣ್ಯ, ಜೀವಿಪರಿಸ್ಥಿತಿ ಮತ್ತು ಪರಿಸರ ಸಚಿವರು

| ಕ್ರ. ಸಂ | ಪ್ರಶ್ನೆ | ಉತ್ತರ |
|---|---|---|
| ಅ) | ಅರಣ್ಯ ಇಲಾಖೆಯಲ್ಲಿ ಮಂಜೂರಾಗಿರುವ ಹುದ್ದೆಗಳ ಸಂಖ್ಯೆ ಎಷ್ಟು; ಈಗಾಗಲೇ ಮಂಜೂರಾಗಿ ಖಾಲಿ ಇರುವ ವಿವಿಧ ವೃಂದದ ಹುದ್ದೆಗಳ ಸಂಖ್ಯೆ ಎಷ್ಟು; ಖಾಲಿ ಇರುವ ಹುದ್ದೆಗಳನ್ನು ಯಾವ ಕಾಲಮಿತಿಯೊಳಗೆ ಭರ್ತಿ ಮಾಡಲಾಗುವುದು: (ಎಲ್ಲಾ ವೃಂದದ ಸಂಪೂರ್ಣ ವಿವರ ನೀಡುವುದು) | 1. ಅರಣ್ಯ ಇಲಾಖೆಯಲ್ಲಿ ವಿವಿಧ ವೃಂದಗಳಲ್ಲಿ ಮಂಜೂರಾಗಿರುವ ಹಾಗೂ ಖಾಲಿ ಇರುವ ಹುದ್ದೆಗಳ ಮಾಹಿತಿಯನ್ನು **ಅನುಬಂಧ-1**ರಲ್ಲಿ ಲಗತ್ತಿಸಿದೆ.<br><br>2. ಅರಣ್ಯ ಇಲಾಖೆಯಲ್ಲಿ ಗ್ರೂಪ್ 'ಎ', 'ಬಿ', 'ಸಿ' ಮತ್ತು 'ಡಿ'ಗೆ ಸೇರಿದ ವೃಂದವಾರು ನೇರನೇಮಕಾತಿ (DR) ಕೋಟಾದ ಹಾಗೂ ಮುಂಬಡ್ತಿ (PR) ಕೋಟಾದ ಹುದ್ದೆಗಳನ್ನು ಭರ್ತಿ ಮಾಡಲು ಕೈಗೊಂಡಿರುವ ಕ್ರಮದ ವಿವರಗಳನ್ನು **ಅನುಬಂಧ-2**ರಲ್ಲಿ ಲಗತ್ತಿಸಿದೆ.<br><br>3. ಖಾಲಿ ಹುದ್ದೆಗಳನ್ನು ಭರ್ತಿ ಮಾಡುವ ಕಾಲಮಿತಿಯ ವಿವರ ಈ ಕೆಳಕಂಡಂತಿದೆ.<br>a. **ಗ್ರೂಪ್ 'ಎ'** ಗೆ ಸೇರಿದ ನೇರನೇಮಕಾತಿ (DR) ಕೋಟಾದ ಹುದ್ದೆಗಳಲ್ಲಿ ಭಾರತೀಯ ಅರಣ್ಯ ಸೇವೆಗೆ ಸೇರಿದ ಹುದ್ದೆಗಳು ಹಾಗೂ ರಾಜ್ಯ ಅರಣ್ಯ ಸೇವೆಗೆ ಸೇರಿದ ಹುದ್ದೆಗಳು ಸೇರಿರುತ್ತವೆ. ಭಾರತೀಯ ಅರಣ್ಯ ಸೇವೆಗೆ ಸೇರಿದ ಖಾಲಿ ಹುದ್ದೆಗಳನ್ನು ಕೇಂದ್ರ ಸರ್ಕಾರದ ಮೂಲಕ ಕಾಲಕಾಲಕ್ಕೆ ಭರ್ತಿ ಮಾಡಲಾಗುತ್ತಿದೆ. ಹಾಗೂ ರಾಜ್ಯ ಅರಣ್ಯ ಸೇವೆಗೆ ಸೇರಿದ ಹುದ್ದೆಗಳನ್ನು ಕರ್ನಾಟಕ ಲೋಕಸೇವಾ ಆಯೋಗದ ಮೂಲಕ ಕಾಲ ಕಾಲಕ್ಕೆ ಭರ್ತಿ ಮಾಡಲಾಗುತ್ತಿದೆ.<br><br>b. **ಗ್ರೂಪ್ 'ಸಿ'** ಗೆ ಸೇರಿದ ಲಿಪಿಕ ವರ್ಗದ ಪ್ರಥಮ ದರ್ಜೆ ಸಹಾಯಕ, ದ್ವಿತೀಯ ದರ್ಜೆ ಸಹಾಯಕ ವೃಂದ, ಶೀಘ್ರಲಿಪಿಗಾರ ಹಾಗೂ ಬೆರಳಚ್ಚುಗಾರ ವೃಂದದ ನೇರನೇಮಕಾತಿ (DR) ಕೋಟಾದ ಹುದ್ದೆಗಳನ್ನು ಕರ್ನಾಟಕ ಲೋಕಸೇವಾ ಆಯೋಗದ ಮೂಲಕ ಭರ್ತಿ ಮಾಡಲಾಗುತ್ತಿದೆ.<br><br>c. **ಗ್ರೂಪ್ 'ಬಿ'** ಗೆ ಸೇರಿದ ಅರಣ್ಯ ಇಲಾಖೆಯ ಕಾರ್ಯಕಾರಿ ವೃಂದಗಳಾದ ವಲಯ ಅರಣ್ಯಾಧಿಕಾರಿ, **ಗ್ರೂಪ್ 'ಸಿ'** ಗೆ ಸೇರಿದ ಉಪ ವಲಯ ಅರಣ್ಯಾಧಿಕಾರಿ-ಕಂ-ಮೋಜಣಿದಾರ, ಅರಣ್ಯ ರಕ್ಷಕ, ಹಾಗೂ **ಗ್ರೂಪ್ 'ಡಿ'** ಗೆ ಸೇರಿದ ಅರಣ್ಯ ವೀಕ್ಷಕ ಮತ್ತು ಆನೆ ಮಾವುತ ಹುದ್ದೆಗಳನ್ನು ಅರಣ್ಯ ಇಲಾಖೆಯ ಮೂಲಕ ಕಾಲ ಕಾಲಕ್ಕೆ ಭರ್ತಿ ಮಾಡಲಾಗುತ್ತಿದೆ. |

<table>
<tr>
<td>ಆ)</td>
<td>ಅರಣ್ಯ ಸಿಬ್ಬಂದಿಗಳಿಗೆ ಅರಣ್ಯದಲ್ಲಿ ಕಾರ್ಯನಿರ್ವಹಿಸಲು ಸಮರ್ಪಕವಾದ ಉಪಕರಣಗಳು/ಸೌಲಭ್ಯಗಳನ್ನು ಒದಗಿಸಲಾಗಿದೆಯೇ: (ವಿವರವಾದ ಮಾಹಿತಿ ನೀಡುವುದು)</td>
<td>ಅರಣ್ಯ ಇಲಾಖೆಯ ಮುಂಚೂಣಿ ಸಿಬ್ಬಂದಿಗಳಾದ ಅರಣ್ಯ ವೀಕ್ಷಕ/ ಅರಣ್ಯ ರಕ್ಷಕ (ಪ್ರಸ್ತುತ ಗಸ್ತು ಅರಣ್ಯ ಪಾಲಕ)/ ಉಪ ವಲಯ ಅರಣ್ಯಾಧಿಕಾರಿ-ಕಂ-ಮೋಜಣಿದಾರ/ವಲಯ ಅರಣ್ಯಾಧಿಕಾರಿಗಳಿಗೆ ಇಲಾಖೆಗೆ ಲಭ್ಯವಿರುವ ಅನುದಾನದ ಮಿತಿಯಲ್ಲಿ ಅರಣ್ಯ ಪ್ರದೇಶದಲ್ಲಿ ಕಾರ್ಯನಿರ್ವಹಿಸಲು ಈ ಕೆಳಕಂಡಂತೆ ಸಮಪರ್ಕವಾದ ಉಪಕರಣಗಳು/ ಸೌಲಭ್ಯಗಳನ್ನು ನೀಡಲಾಗುತ್ತಿದೆ.
<ul>
<li>ಕಾಡಿನಂಚಿನ ಮತ್ತು ಅರಣ್ಯ ಪ್ರದೇಶದಲ್ಲಿ ಗಸ್ತು ಕಾರ್ಯಕ್ಕಾಗಿ ಇಲಾಖಾ ವಾಹನಗಳ ಸೌಲಭ್ಯವನ್ನು ನೀಡಲಾಗುತ್ತಿದೆ.</li>
<li>ಕ್ಷೇತ್ರ ಸಿಬ್ಬಂದಿಗಳಿಗೆ ಅರಣ್ಯ ವಸತಿ ಗೃಹಗಳು ಹಾಗೂ ಅರಣ್ಯ ವಿಶ್ರಾಂತಿ ಗೃಹಗಳ ಸೌಲಭ್ಯಗಳನ್ನು ಒದಗಿಸಲಾಗುತ್ತಿದೆ.</li>
<li>ಪ್ರತಿಕೂಲ ಭೂಪ್ರದೇಶದಲ್ಲಿ ಪರಿಣಾಮಕಾರಿ ಮಾಹಿತಿ ಸಂವಹನ ಸಂಪರ್ಕ ಸಾಧನಕ್ಕಾಗಿ ಸಿಬ್ಬಂದಿಗಳ ಬಳಕೆಗೆ ಅರಣ್ಯ ಪ್ರದೇಶದಲ್ಲಿ ಹಾಗೂ ವೈರ್‌ಲೆಸ್ ಆಧಾರಿತ ವಾಕಿಟಾಕಿಗಳ ಸೆಟ್ ಬಳಕೆ ಮತ್ತು ಮೊಬೈಲ್‌ಗಳನ್ನು ಪೂರೈಸಲಾಗುತ್ತಿದೆ.</li>
<li>ಅರಣ್ಯ ಮತ್ತು ವನ್ಯಜೀವಿ ಅಪರಾದ ಪ್ರಕರಣಗಳಲ್ಲಿ ತೊಡಗಿರುವ ಕಾಡುಗಳ್ಳರುಗಳನ್ನು ಹಿಡಿಯಲು ಹಾಗೂ ಸಿಬ್ಬಂದಿಗಳ ಸ್ವಯಂ ರಕ್ಷಣೆಗಾಗಿ ಅಲ್ಲದೇ, ಕಾಡುಪ್ರಾಣಿಗಳಿಂದ ರಕ್ಷಣೆಗಾಗಿ ಸಿಬ್ಬಂದಿಗೆ ಇಲಾಖೆಯ ವತಿಯಿಂದ ಶಸ್ತ್ರಾಸ್ತ್ರಗಳನ್ನು ಒದಗಿಸಲಾಗುತ್ತಿದೆ.</li>
<li>ಸೂಕ್ಷ್ಮ ಪ್ರದೇಶಗಳಲ್ಲಿ ಕಳ್ಳಬೇಟೆ ತಡೆ ಶಿಬಿರಗಳನ್ನು (Anti-Poaching Camps) ಸ್ಥಾಪಿಸಿ, ವನ್ಯಜೀವಿ ರಕ್ಷಣೆ ಮತ್ತು ಕಳ್ಳಬೇಟೆ ತಡೆಯಲು ಗಸ್ತು ತಿರುಗುತ್ತಿರುವ ಸಿಬ್ಬಂದಿಗಳಿಗೆ ಮೂಲಭೂತ ಸೌಕರ್ಯವಾದ ವ್ಯವಸ್ಥೆಗಳನ್ನು (ಕುಡಿಯುವ ನೀರು, ಅಡಿಗೆ, ವಿದ್ಯುತ್/ಸೋಲಾರ, ವಾಟರ್ ಪಂಪ್, Ration ಮೂಂತಾದವು) ಒದಗಿಸಲಾಗುತ್ತಿದೆ</li>
<li>ಪ್ರತಿ ವರ್ಷ ಇಲಾಖೆಯ ವತಿಯಿಂದ ಎಲ್ಲಾ ಮುಂಚೂಣಿ ಸಿಬ್ಬಂದಿಗಳಿಗೆ ಸಮವಸ್ತ್ರಗಳನ್ನು ಒದಗಿಸಲಾಗುತ್ತಿದೆ.</li>
<li>ಬೇಸಿಗೆ ಸಮಯದಲ್ಲಿ ಉಂಟಾಗುವ ಅರಣ್ಯ ಕಾಡ್ಗಿಚ್ಚನ್ನು ನಂದಿಸಲು ಸಿಬ್ಬಂದಿಗಳಿಗೆ ಅಗತ್ಯವಿರುವ ಉಪಕರಣಗಳನ್ನು ಒದಗಿಸಲಾಗುತ್ತಿದೆ.</li>
</ul>
</td>
</tr>
<tr>
<td>ಇ)</td>
<td>ವನ್ಯಜೀವಿ ಅರಣ್ಯ ಪ್ರದೇಶದಲ್ಲಿ ಕಾರ್ಯನಿರ್ವಹಿಸುತ್ತಿರುವ ವೈದ್ಯರ ಸಂಖ್ಯೆ ಎಷ್ಟು; ಮಂಜೂರಾಗಿರುವ ವೈದ್ಯರ ಸಂಖ್ಯೆ ಎಷ್ಟು; ಪ್ರಸ್ತುತ ಖಾಲಿ ಇರುವ ಹುದ್ದೆಗಳನ್ನು ಯಾವ ಕಾಲಮಿತಿಯೊಳಗೆ ಭರ್ತಿ ಮಾಡಲಾಗುವುದು?</td>
<td>ವನ್ಯಜೀವಿ ಅರಣ್ಯ ಪ್ರದೇಶಗಳಲ್ಲಿನ ಘಟಕಗಳಿಗೆ ಮಂಜೂರಾಗಿರುವ, ಭರ್ತಿಯಾಗಿರುವ ಹಾಗೂ ಖಾಲಿ ಇರುವ ಪಶು ವೈದ್ಯಕೀಯ ವೃಂದಗಳ ಹುದ್ದೆಗಳ ವಿವರ ಈ ಕೆಳಗಿನಂತಿದೆ.
<table>
<tr><th colspan="2">ವೃಂದ</th><th>ಮಂಜೂರಾದ ಹುದ್ದೆಗಳು</th><th>ಭರ್ತಿಯಾದ ಹುದ್ದೆಗಳು</th><th>ಖಾಲಿಯಿರುವ ಹುದ್ದೆಗಳು</th></tr>
<tr><td>1</td><td>ಸಹಾಯಕ ನಿರ್ದೇಶಕರು (ಪಶು ವೈದ್ಯಕೀಯ)</td><td>1</td><td>0</td><td>1</td></tr>
</table>
</td>
</tr>
</table>

<table>
<tr>
<td></td>
<td></td>
<td>
<table>
<tr><td>2</td><td>ಸಹಾಯಕ ವೈದ್ಯಾಧಿಕಾರಿ (ಪಶು ವೈದ್ಯಕೀಯ)</td><td>11</td><td>5</td><td>6</td></tr>
<tr><td colspan="2">ಒಟ್ಟು</td><td>12</td><td>5</td><td>7</td></tr>
</table>
<br>
ಅರಣ್ಯ ಇಲಾಖೆಯ ವೃಂದ ಮತ್ತು ನೇಮಕಾತಿ ನಿಯಮಗಳನ್ವಯ ಈ ಮೇಲಿನ ಹುದ್ದೆಗಳನ್ನು ಪಶುಸಂಗೋಪನೆ ಮತ್ತು ಮೀನುಗಾರಿಕೆ ಇಲಾಖೆಯಿಂದ ನಿಯೋಜನೆ ಮೇಲೆ ಲಭ್ಯತೆ ಆಧಾರದ ಮೇಲೆ ಭರ್ತಿ ಮಾಡಲಾಗುತ್ತಿದೆ.
</td>
</tr>
</table>

ಸಂಖ್ಯೆ: ಎಫ್ಇಇ 58 ಎಫ್ಇಜಿ 2025

**(ಈಶ್ವರ ಬಿ. ಖಂಡ್ರೆ)**

ಅರಣ್ಯ, ಜೀವಿಪರಿಸ್ಥಿತಿ ಮತ್ತು ಪರಿಸರ ಸಚಿವರು

# ಅನುಬಂಧ-1

## ಅರಣ್ಯ ಇಲಾಖೆಯ ವಿವಿಧ ವೃಂದಗಳಲ್ಲಿನ ಹುದ್ದೆಗಳ ವಿವರ

| ಗ್ರೂಪ್ | ಕ್ರ. ಸಂ. | ವೃಂದ/ ಪದನಾಮ | ಮಂಜೂರಾದ ಹುದ್ದೆಗಳು | ಭರ್ತಿಯಾದ ಹುದ್ದೆಗಳು | ಖಾಲಿಯಿರುವ ಹುದ್ದೆಗಳು |
|---|---|---|---|---|---|
| Group -A | 1 | IFS Total | 164 | 106 | 58 |
| | 2 | Deputy Conservator of Forests (SFS)- Only 42 sanctioned posts of DCF SFS as per C&R Rules. Remaining posts are created through GOs in various departments from time to time. | 42<br>58 | 99 | 1 |
| | 3 | Assistant Conservator of Forests (SFS) | 231 | 210 | 21 |
| | 4 | Administrative Officer | 5 | 4 | 1 |
| | 5 | Chief Accounts Officer | 1 | 1 | 0 |
| | | **Group - A Total** | **501** | **420** | **81** |
| Group-B | 6 | Range Forest Officer | 785 | 565 | 220 |
| | 7 | Administrative Assistant | 11 | 10 | 1 |
| | 8 | Gazetted Manager | 71 | 66 | 5 |
| | 9 | Assistant Director (Veterinary) | 1 | 0 | 1 |
| | 10 | Assistant Surgeon (Veterinary) | 11 | 5 | 6 |
| | 11 | Assistant Director (Statistics) | 1 | 2 | -1 |
| | 12 | Deputy Director, Forest Survey, Demarcation and Mapping | 1 | 0 | 1 |
| | 13 | Assistant Director, Forest Survey, Demarcation and Mapping | 1 | 0 | 1 |
| | 14 | Public Judge (Junior Division) | 1 | 0 | 1 |
| | | **Group - B Total** | **883** | **648** | **235** |
| Group-C | 15 | Public Relation Officer | 1 | 0 | 1 |
| | 16 | Forest Chemist | 2 | 0 | 2 |
| | 17 | Draughtsman Grade -I | 4 | 2 | 2 |
| | 18 | Draughtsman Grade -II | 26 | 0 | 26 |
| | 19 | Deputy Range Forest Officer-cum- Surveyor | 3008 | 2457 | 551 |
| | 20 | Forest Guard | 5494 | 2933 | 2561 |
| | 21 | Assistant Statistical Officer | 7 | 2 | 5 |
| | 22 | Photographer | 2 | 0 | 2 |
| | 23 | Junior Engineer | 2 | 0 | 2 |
| | 24 | Librarian | 1 | 1 | 0 |
| | 25 | Asst. Librarian | 1 | 0 | 1 |

| ಗ್ರೂಪ್ | ಕ್ರ. ಸಂ. | ವೃಂದ/ ಪದನಾಮ | ಮಂಜೂರಾದ ಹುದ್ದೆಗಳು | ಭರ್ತಿಯಾದ ಹುದ್ದೆಗಳು | ಖಾಲಿಯಿರುವ ಹುದ್ದೆಗಳು |
|---|---|---|---|---|---|
| | 26 | Statistical Inspector | 7 | 1 | 6 |
| | 27 | PT Instructor | 2 | 0 | 2 |
| | 28 | Senior Driver | 49 | 20 | 29 |
| | 29 | Driver | 174 | 1 | 173 |
| | 30 | Police Constable | 9 | 0 | 9 |
| | 31 | Forest Settlement Officer | 3 | 0 | 3 |
| | 32 | Superintendent (Forest Survey) | 8 | 0 | 8 |
| | 33 | Finance Assistant | 1 | 0 | 1 |
| | 34 | Accounts Superintendent | 8 | 7 | 1 |
| | 35 | Superintendent | 194 | 87 | 107 |
| | 36 | First Division Assistant | 639 | 539 | 100 |
| | 37 | Stenographers | 44 | 25 | 19 |
| | 38 | Senior Typist | 22 | 6 | 16 |
| | 39 | Second Division Assistant | 524 | 207 | 317 |
| | 40 | Typist | 107 | 10 | 97 |
| | 41 | Elephant Jamedar | 8 | 7 | 1 |
| | | **Group - C Total** | **10347** | **6305** | **4042** |
| Group-D | 42 | Film Projector Operator | 7 | 0 | 7 |
| | 43 | Crane Operator | 2 | 0 | 2 |
| | 44 | Elephant Mahout | 122 | 77 | 45 |
| | 45 | Elephant Kawadi | 122 | 47 | 75 |
| | 46 | Forest Watcher | 1892 | 457 | 1435 |
| | 47 | Attenders / Daftarband/ Jamedar / Lift Attender / Pumpset Operator / Wireless mechanic | 29 | 18 | 11 |
| | 48 | Butlers | 5 | 2 | 3 |
| | 49 | Caretaker of Forest Lodges, Tindal, Ward Boy, Laskar, Female Ward Servant, Sweeper, Scavenger, Cooli, Mali, Dalayath, Gardener, Cleaner, Watchman | 889 | 483 | 406 |
| | | **Group - D Total** | **3068** | **1084** | **1984** |
| | | **Grand Total (Group A+B+C+D)** | **14799** | **8457** | **6342** |

# ಅನುಬಂಧ-2

## ಅರಣ್ಯ ಇಲಾಖೆಯ ವಿವಿಧ ವೃಂದಗಳಲ್ಲಿನ ಖಾಲಿ ಹುದ್ದೆಗಳನ್ನು ಭರ್ತಿ ಮಾಡಲು ಕೈಗೊಂಡ ಕ್ರಮದ ವಿವರ

| ಕ್ರ. ಸಂ. | ವೃಂದ/ಪದನಾಮ | ನೇರ ನೇಮಕಾತಿ (DR) ಕೋಟಾ ಮತ್ತು ಮುಂಬಡ್ತಿ (PR) ಕೋಟಾದಲ್ಲಿನ ಖಾಲಿ ಹುದ್ದೆಗಳನ್ನು ಭರ್ತಿ ಮಾಡಲು ಕೈಗೊಂಡಿರುವ ಕ್ರಮ |
|---|---|---|
| 1 | IFS Total | ಸದರಿ ಹುದ್ದೆಗಳ ಪೈಕಿ ನೇರ ನೇಮಕಾತಿ ಮೂಲಕ ಹಾಗೂ ರಾಜ್ಯ ಅರಣ್ಯ ಸೇವೆಯಿಂದ ಭಾರತೀಯ ಅರಣ್ಯ ಸೇವೆಗೆ ಬಡ್ತಿ ಮೂಲಕ ಕೇಂದ್ರ ಸರ್ಕಾರದಿಂದ ವರ್ಷ-ವರ್ಷ ಭರ್ತಿ ಮಾಡಲಾಗುತ್ತಿದೆ. |
| 2 | Deputy Conservator of Forests (SFS)- Only 42 sanctioned posts of DCF SFS as per C&R Rules. Remaining posts are created through GOs in various departments from time to time. | ವೃಂದ ಮತ್ತು ನೇಮಕಾತಿ ನಿಯಮಗಳಂತೆ ಸದರಿ ಹುದ್ದೆಯು 100% ಮುಂಬಡ್ತಿ ಮೂಲಕ ಭರ್ತಿ ಮಾಡಬೇಕಾಗಿದೆ.<br>ಬಡ್ತಿ (PR):-<br>ಅದರನ್ವಯ, ದಿನಾಂಕ:15.07.2024 ರಂದು 31 ಸಹಾಯಕ ಅರಣ್ಯ ಸಂರಕ್ಷಣಾದಿಕಾರಿಗಳಿಗೆ ಉಪ ಅರಣ್ಯ ಸಂರಕ್ಷಣಾದಿಕಾರಿ ವೃಂದಕ್ಕೆ ಮುಂಬಡ್ತಿ ನೀಡಲಾಗಿರುತ್ತದೆ. ತದನಂತರ, ದಿನಾಂಕ:30.07.2024 ರಂದು 29 ಸಹಾಯಕ ಅರಣ್ಯ ಸಂರಕ್ಷಣಾದಿಕಾರಿಗಳಿಗೆ ಉಪ ಅರಣ್ಯ ಸಂರಕ್ಷಣಾದಿಕಾರಿ ವೃಂದಕ್ಕೆ ಮುಂಬಡ್ತಿ ನೀಡಿ ಹುದ್ದೆಗಳನ್ನು ಭರ್ತಿ ಮಾಡಲಾಗಿದೆ.. |
| 3 | Assistant Conservator of Forests (SFS) | ವೃಂದ ಮತ್ತು ನೇಮಕಾತಿ ನಿಯಮಗಳನ್ವಯ ಸದರಿ ಹುದ್ದೆಯನ್ನು 25% ನೇರ ನೇಮಕಾತಿ ಮತ್ತು 75% ಬಡ್ತಿ ಮೂಲಕ ಭರ್ತಿ ಮಾಡಬೇಕಾಗಿರುತ್ತದೆ<br>ನೇರ ನೇಮಕಾತಿ (DR):<br>Non-HK:-<br>16 ಹುದ್ದೆಗಳಿಗೆ ಕರ್ನಾಟಕ ಲೋಕ ಸೇವಾ ಆಯೋಗದ ಅಧಿಸೂಚನೆ ಸಂಖ್ಯೆ: ಪಿಎಸ್‌ಸಿ 3337 ಇ(1)/2020-21 ದಿನಾಂಕ: 13.10.2020ರಡಿ ಆಯೋಗದ ಅಧಿಸೂಚನೆ ದಿನಾಂಕ: 21.10.2023ರಲ್ಲಿ ಅಂತಿಮ ಆಯ್ಕೆ ಪಟ್ಟಿಯನ್ವಯ ಸರ್ಕಾರದ ಅಧಿಸೂಚನೆ ಸಂಖ್ಯೆ:ಎಫ್‌ಇಇ 15 ಎಫ್‌ಇಜಿ 2019 (ಇ), ದಿನಾಂಕ:15.07.2024 ರಲ್ಲಿ ನೇಮಕಾತಿ ಆದೇಶವನ್ನು ನೀಡಲಾಗಿರುತ್ತದೆ.<br>ಪ್ರಸ್ತುತ, ಉಳಿಕೆ ಮೂಲ ವೃಂದದಲ್ಲಿ ನೇರ ನೇಮಕಾತಿ [DR] ಕೋಟಾದಡಿ ಖಾಲಿ ಇರುವ 10 ಸಹಾಯಕ ಅರಣ್ಯ ಸಂರಕ್ಷಣಾಧಿಕಾರಿ (ACF) ಹುದ್ದೆಗಳನ್ನು ಸರ್ಕಾರದ ವತಿಯಿಂದ ಕರ್ನಾಟಕ ಲೋಕ ಸೇವಾ ಆಯೋಗದ ಮೂಲಕ ಭರ್ತಿ ಮಾಡಬೇಕಾಗಿದ್ದು, ಪರಿಶೀಲನೆಯಲ್ಲಿರುತ್ತದೆ.<br>HK:- ಪ್ರಸ್ತುತ, ಕಲ್ಯಾಣ ಕರ್ನಾಟಕ ಪ್ರದೇಶದ ಸ್ಥಳೀಯ ಮೂಲ ವೃಂದದಲ್ಲಿ ನೇರ ನೇಮಕಾತಿ [DR] ಕೋಟಾದಡಿ ಖಾಲಿ ಇರುವ 05 ಸಹಾಯಕ ಅರಣ್ಯ ಸಂರಕ್ಷಣಾಧಿಕಾರಿ (ACF) ಹುದ್ದೆಗಳನ್ನು ಕರ್ನಾಟಕ ಲೋಕ ಸೇವಾ ಆಯೋಗದ ಮೂಲಕ ಭರ್ತಿ ಮಾಡಬೇಕಾಗಿದ್ದು, ಪರಿಶೀಲನೆಯಲ್ಲಿರುತ್ತದೆ. |

| ಕ್ರ. ಸಂ. | ವೃಂದ/ಪದನಾಮ | ನೇರ ನೇಮಕಾತಿ (DR) ಕೋಟಾ ಮತ್ತು ಮುಂಬಡ್ತಿ (PR) ಕೋಟಾದಲ್ಲಿನ ಖಾಲಿ ಹುದ್ದೆಗಳನ್ನು ಭರ್ತಿ ಮಾಡಲು ಕೈಗೊಂಡಿರುವ ಕ್ರಮ |
|---|---|---|
| | | ಬಡ್ತಿ (PR):<br>ವೃಂದ ಮತ್ತು ನೇಮಕಾತಿ ನಿಯಮಗಳಂತೆ ಮುಂಬಡ್ತಿ ಮೂಲಕ ಭರ್ತಿ ಮಾಡಬೇಕಾಗಿದ್ದು, ಅರ್ಹತೆ ಮತ್ತು ಸೂಕ್ತತೆಯ ಆಧಾರದ ಮೇಲೆ ಕಾಲ-ಕಾಲಕ್ಕೆ ಬಡ್ತಿ ಪ್ರಕ್ರಿಯೆಯನ್ನು ಕೈಗೊಳ್ಳಲಾಗುತ್ತಿದೆ.<br>Non-HK:- ದಿನಾಂಕ:07.08.2024 ರಂದು 72 ವಲಯ ಅರಣ್ಯಾಧಿಕಾರಿಗಳಿಗೆ ಸಹಾಯಕ ಅರಣ್ಯ ಸಂರಕ್ಷಣಾಧಿಕಾರಿ ವೃಂದಕ್ಕೆ ಮುಂಬಡ್ತಿಯನ್ನು ಮತ್ತು ದಿನಾಂಕ:20.02.2025 ರಂದು 19 ವಲಯ ಅರಣ್ಯಾಧಿಕಾರಿಗಳಿಗೆ ಮುಂಬಡ್ತಿಯನ್ನು ನೀಡಲಾಗಿರುತ್ತದೆ.<br>HK:<br>ಕರ್ನಾಟಕ ರಾಜ್ಯ ಆಡಳಿತ ನ್ಯಾಯಮಂಡಳಿ, ಕಲಬುರಗಿ ಪೀಠ ಅರ್ಜಿ ಸಂಖ್ಯೆ:OA/20674-20678/2024ರಲ್ಲಿ ನ್ಯಾಯಮಂಡಳಿಯು ದಿನಾಂಕ:05.07.2024ರಂದು ನಡೆದ ವಿಚಾರಣೆಯಲ್ಲಿ ನಿರ್ದೇಶನ/ಮಧ್ಯಂತರ ಆದೇಶದ ಹಿನ್ನೆಲೆಯಲ್ಲಿ ಅರ್ಹತೆಯನುಸಾರ 01 ವಲಯ ಅರಣ್ಯಾಧಿಕಾರಿಗಳಿಗೆ ಮಾತ್ರ ಸಹಾಯಕ ಅರಣ್ಯ ಸಂರಕ್ಷಣಾದಿಕಾರಿ ವೃಂದಕ್ಕೆ ಮುಂಬಡ್ತಿ ನೀಡಲಾಗಿರುತ್ತದೆ. ಅಲ್ಲದೇ, ವಲಯ ಅರಣ್ಯಾಧಿಕಾರಿಗಳ ಜ್ಯೇಷ್ಠತೆಗೆ ಸಂಬಂಧಿಸಿದಂತೆ KSAT, Belagavi Bentch ಅರ್ಜಿ ಸಂಖ್ಯೆ:10847-10848/2024 ರಲ್ಲಿ ನ್ಯಾಯಮಂಡಳಿಯು ದಿನಾಂಕ:18.07.2024 ರಂದು ನಡೆದ ವಿಚಾರಣೆಯಲ್ಲಿ ಮಧ್ಯಂತರ ಆದೇಶ ಬಂದಿರುತ್ತದೆ. ಈ ಎರಡು ನ್ಯಾಯಮಂಡಳಿಯ ಮಧ್ಯಂತರ ಆದೇಶಗಳ ಹಿನ್ನೆಲೆಯಲ್ಲಿ ವಲಯ ಅರಣ್ಯಾಧಿಕಾರಿ ವೃಂದದಿಂದ ಸಹಾಯಕ ಅರಣ್ಯ ಸಂರಕ್ಷಣಾಧಿಕಾರಿ ವೃಂದಕ್ಕೆ ಮುಂಬಡ್ತಿಯನ್ನು ನೀಡಲು ಸಾದ್ಯವಾಗಿರುವುದಿಲ್ಲ. ಪ್ರಸ್ತುತ ಎರಡು ಪ್ರಕರಣಗಳು KSAT ಬೆಂಗಳೂರು ಇಲ್ಲಿ ವರ್ಗಾಯಿಸಲಾಗಿದ್ದು, ಬಾಕಿಯಿರುತ್ತದೆ. |
| 4 | Administrative Officer | ವೃಂದ ಮತ್ತು ನೇಮಕಾತಿ ನಿಯಮಗಳಂತೆ ಸದರಿ ಹುದ್ದೆಯು 100% ಮುಂಬಡ್ತಿ ಮೂಲಕ ಭರ್ತಿ ಮಾಡಬೇಕಾಗಿದ್ದು, ಅರ್ಹತೆ ಮತ್ತು ಸೂಕ್ತತೆಯ ಆಧಾರದ ಮೇಲೆ ಕಾಲ-ಕಾಲಕ್ಕೆ ಬಡ್ತಿ ಪ್ರಕ್ರಿಯೆಯನ್ನು ಕೈಗೊಳ್ಳಲಾಗುತ್ತಿದೆ.<br>ಬಡ್ತಿ:<br>Non-HK:- ದಿನಾಂಕ 12-02-2025 ರಂದು ಉಳಿಕೆ ಮೂಲ ವೃಂದದಲ್ಲಿ ಖಾಲಿ ಇರುವ 01 ಆಡಳಿತಾಧಿಕಾರಿ ಹುದ್ದೆಗೆ ಮುಂಬಡ್ತಿಯನ್ನು ನೀಡಲಾಗಿರುತ್ತದೆ.<br>HK:- ದಿನಾಂಕ:12-02-2025 ರಂದು ಉಳಿಕೆ ಮೂಲ ವೃಂದದಲ್ಲಿ ಖಾಲಿ ಇರುವ 01 ಆಡಳಿತಾಧಿಕಾರಿ ಹುದ್ದೆಗೆ ಮುಂಬಡ್ತಿಯನ್ನು ನೀಡಲಾಗಿರುತ್ತದೆ. ಸದರಿಯವರು ಮುಂಬಡ್ತಿಯನ್ನು ನಿರಾಕರಿಸಿರುತ್ತಾರೆ. |
| 5 | Chief Accounts Officer | ನಿಯೋಜನೆ ಮೂಲಕ |
| 6 | Range Forest Officer | ವೃಂದ ಮತ್ತು ನೇಮಕಾತಿ ನಿಯಮಗಳನ್ವಯ ಸದರಿ ಹುದ್ದೆಯನ್ನು 50% ನೇರ ನೇಮಕಾತಿ ಮತ್ತು 50% ಬಡ್ತಿ ಮೂಲಕ ಭರ್ತಿ ಮಾಡಬೇಕಾಗಿರುತ್ತದೆ.<br>ನೇರ ನೇಮಕಾತಿ: (DR)<br>Non-HK:- ಅರಣ್ಯ ಇಲಾಖೆಯ ಉಳಿಕೆ ಮೂಲ ವೃಂದದಲ್ಲಿನ ನೇರ ನೇಮಕಾತಿ [DR] ಕೋಟಾದಡಿ ಖಾಲಿಯಿರುವ 87 ವಲಯ ಅರಣ್ಯಾಧಿಕಾರಿ ಹುದ್ದೆಗಳನ್ನು ಭರ್ತಿ ಮಾಡುವ ಪ್ರಸ್ತಾವನೆಯು ಪರಿಶೀಲನೆಯಲ್ಲಿದೆ. |

| ಕ್ರ. ಸಂ. | ವೃಂದ/ಪದನಾಮ | ನೇರ ನೇಮಕಾತಿ (DR) ಕೋಟಾ ಮತ್ತು ಮುಂಬಡ್ತಿ (PR) ಕೋಟಾದಲ್ಲಿನ ಖಾಲಿ ಹುದ್ದೆಗಳನ್ನು ಭರ್ತಿ ಮಾಡಲು ಕೈಗೊಂಡಿರುವ ಕ್ರಮ |
|---|---|---|
| | | HK:- ಪ್ರಧಾನ ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿ (ಅರಣ್ಯ ಪಡೆ ಮುಖ್ಯಸ್ಥರು) ಹಾಗೂ ಆಯ್ಕೆ ಪ್ರಾಧಿಕಾರ, ಬೆಂಗಳೂರು ಇವರ ಕಛೇರಿ ಅಧಿಸೂಚನೆ ಸಂಖ್ಯೆ: ಬಿ9/ನೇಮಕಾತಿ/ ವಿವ-6/2021-22 ದಿನಾಂಕ: 15.10.2022ರಲ್ಲಿ ಒಟ್ಟು 10 ಹುದ್ದೆಗಳಿಗೆ ಅಧಿಸೂಚನೆಯನ್ನು ಹೊರಡಿಸಲಾಗಿದೆ. ನೇರ ನೇಮಕಾತಿ ಪ್ರಕ್ರಿಯೆ ಚಾಲ್ತಿಯಲ್ಲಿರುತ್ತದೆ.<br>ಬಡ್ತಿ (PR):<br>1) ರಾಜ್ಯದ ಒಟ್ಟು 13 ಪ್ರಾದೇಶಿಕ ವೃತ್ತಗಳಲ್ಲಿ ಅಂತಿಮವಾಗಿ ಪ್ರಕಟಿಸಿರುವ ಉಪ ವಲಯ ಅರಣ್ಯಾಧಿಕಾರಿ-ಕಂ-ಮೋಜಣಿದಾರರ ಜ್ಯೇಷ್ಠತಾ ಪಟ್ಟಿಗಳ ಪೈಕಿ, ನಾಲ್ಕು (4) ವೃತ್ತಗಳ ಜ್ಯೇಷ್ಠತಾ ಪಟ್ಟಿಗಳನ್ನು ಕರ್ನಾಟಕ ಆಡಳಿತ ನ್ಯಾಯಾಮಂಡಳಿಯಲ್ಲಿ ದಾಖಲಿಸಿದ ವಿವಿಧ ಅರ್ಜಿಗಳಲ್ಲಿನ ಆದೇಶಗಳಲ್ಲಿ set aside ಆಗಿರುತ್ತವೆ.<br>2) ಈ ವಿಷಯದಲ್ಲಿ ನ್ಯಾಯಾಲಯಗಳ ಆದೇಶಗಳನ್ನು ಗಮನದಲ್ಲಿರಿಸಿ ವಲಯ ಅರಣ್ಯಾಧಿಕಾರಿ ವೃಂದಕ್ಕೆ ಮುಂಬಡ್ತಿ ನೀಡುವ ಪ್ರಕ್ರಿಯೆ ಪ್ರಾರಂಭಿಸಲು ಸಾಧ್ಯವಾಗುತ್ತದೆ. |
| 7 | Administrative Assistant | ವೃಂದ ಮತ್ತು ನೇಮಕಾತಿ ನಿಯಮಗಳಂತೆ ಸದರಿ ಹುದ್ದೆಯು 100% ಮುಂಬಡ್ತಿ ಮೂಲಕ ಭರ್ತಿ ಮಾಡಬೇಕಾಗಿದ್ದು, ಅರ್ಹತೆ ಮತ್ತು ಸೂಕ್ತತೆಯ ಆಧಾರದ ಮೇಲೆ ಕಾಲ-ಕಾಲಕ್ಕೆ ಬಡ್ತಿ ಪ್ರಕ್ರಿಯೆಯನ್ನು ಕೈಗೊಳ್ಳಲಾಗುತ್ತಿದೆ.<br>ಬಡ್ತಿ:<br>Non-HK:- ರಾಜ್ಯ ಮಟ್ಟದ ಉಳಿಕೆ ಮೂಲ ವೃಂದದ ವ್ಯವಸ್ಥಾಪಕರುಗಳಿಗೆ ಆಡಳಿತ ಸಹಾಯಕರ ವೃಂದಕ್ಕೆ ಸ್ಥಾನಪನ್ನ ಬಡ್ತಿಗಾಗಿ ಅರ್ಹತೆಯನ್ನು ಪರಿಶೀಲಿಸಲು ದಿನಾಂಕ:11.11.2024ರಂದು ನಡೆದ ಇಲಾಖಾ ಮುಂಬಡ್ತಿ ಸಮಿತಿಯ ಸಭೆಯ ತೀರ್ಮಾನದಂತೆ, ಪ್ರಸ್ತುತ ಖಾಲಿ ಇರುವ 02 ಆಡಳಿತ ಸಹಾಯಕರ ಹುದ್ದೆಗೆ ಮುಂಬಡ್ತಿಯನ್ನು ನೀಡಲಾಗಿರುತ್ತದೆ.<br>HK:- ಕಲ್ಯಾಣ-ಕರ್ನಾಟಕ ಸ್ಥಳೀಯ ವೃಂದದ ವ್ಯವಸ್ಥಾಪಕರುಗಳಿಗೆ ಆಡಳಿತ ಸಹಾಯಕರ ವೃಂದಕ್ಕೆ ಸ್ಥಾನಪನ್ನ ಬಡ್ತಿಗಾಗಿ ಅರ್ಹತೆಯನ್ನು ಪರಿಶೀಲಿಸಲು ದಿನಾಂಕ:11.11.2024ರಂದು ನಡೆದ ಇಲಾಖಾ ಮುಂಬಡ್ತಿ ಸಮಿತಿಯ ಸಭೆಯ ತೀರ್ಮಾನದಂತೆ, ಪ್ರಸ್ತುತ ಖಾಲಿ ಇರುವ 01 ಆಡಳಿತ ಸಹಾಯಕರ ಹುದ್ದೆಗೆ ಮುಂಬಡ್ತಿಯನ್ನು ನೀಡಲಾಗಿರುತ್ತದೆ. |
| 8 | Gazetted Manager | ವೃಂದ ಮತ್ತು ನೇಮಕಾತಿ ನಿಯಮಗಳಂತೆ ಸದರಿ ಹುದ್ದೆಯು 100% ಮುಂಬಡ್ತಿ ಮೂಲಕ ಭರ್ತಿ ಮಾಡಬೇಕಾಗಿದ್ದು, ಅರ್ಹತೆ ಮತ್ತು ಸೂಕ್ತತೆಯ ಆಧಾರದ ಮೇಲೆ ಕಾಲ-ಕಾಲಕ್ಕೆ ಬಡ್ತಿ ಪ್ರಕ್ರಿಯೆಯನ್ನು ಕೈಗೊಳ್ಳಲಾಗುತ್ತಿದೆ.<br>ಬಡ್ತಿ:<br>Non-HK:- ರಾಜ್ಯ ಮಟ್ಟದ ಉಳಿಕೆ ಮೂಲ ವೃಂದದ ಅಧೀಕ್ಷಕರುಗಳಿಗೆ ವ್ಯವಸ್ಥಾಪಕರ ವೃಂದಕ್ಕೆ ಸ್ಥಾನಪನ್ನ ಬಡ್ತಿಗಾಗಿ ಅರ್ಹತೆಯನ್ನು ಪರಿಶೀಲಿಸಲು ದಿನಾಂಕ:02.07.2024ರಂದು ನಡೆದ ಇಲಾಖಾ ಮುಂಬಡ್ತಿ ಸಮಿತಿಯ ಸಭೆಯ ತೀರ್ಮಾನದಂತೆ, ಪ್ರಸ್ತುತ ಖಾಲಿ ಇರುವ 07 ವ್ಯವಸ್ಥಾಪಕರ ಹುದ್ದೆಗೆ ಮುಂಬಡ್ತಿಯನ್ನು ನೀಡಲಾಗಿರುತ್ತದೆ.<br>HK:- ಕಲ್ಯಾಣ-ಕರ್ನಾಟಕ ಸ್ಥಳೀಯ ವೃಂದದ ಅಧೀಕ್ಷಕರುಗಳಿಗೆ ವ್ಯವಸ್ಥಾಪಕರ ವೃಂದಕ್ಕೆ ಸ್ಥಾನಪನ್ನ ಬಡ್ತಿಗಾಗಿ ಅರ್ಹತೆಯನ್ನು ಪರಿಶೀಲಿಸಲು ದಿನಾಂಕ:11.11.2024ರಂದು ನಡೆದ ಇಲಾಖಾ ಮುಂಬಡ್ತಿ ಸಮಿತಿಯ ಸಭೆಯ ತೀರ್ಮಾನದಂತೆ, ಪ್ರಸ್ತುತ ವ್ಯವಸ್ಥಾಪಕರ ಹುದ್ದೆಗೆ ಬಡ್ತಿಗಾಗಿ ಕನಿಷ್ಟ ಐದು (5)ವರ್ಷಗಳ ಸೇವಾ ಅವಧಿ ಹೊಂದಿದ ಅಧೀಕ್ಷಕರುಗಳು ಯಾರೂ ಇರುವುದಿಲ್ಲ. |

| ಕ್ರ. ಸಂ. | ವೃಂದ/ಪದನಾಮ | ನೇರ ನೇಮಕಾತಿ (DR) ಕೋಟಾ ಮತ್ತು ಮುಂಬಡ್ತಿ (PR) ಕೋಟಾದಲ್ಲಿನ ಖಾಲಿ ಹುದ್ದೆಗಳನ್ನು ಭರ್ತಿ ಮಾಡಲು ಕೈಗೊಂಡಿರುವ ಕ್ರಮ |
|---|---|---|
| | | |
| 9 | Assistant Director (Veterinary) | ನಿಯೋಜನೆ ಮೂಲಕ |
| 10 | Assistant Surgeon (Veterinary) | ನಿಯೋಜನೆ ಮೂಲಕ [5 Tiger Reserves @ ತಲಾ 1 ಹುದ್ದೆ + 6 ವೃತ್ತಗಳು @ ತಲಾ 1 ಹುದ್ದೆ (ಮೈಸೂರು, ಶಿವಮೊಗ್ಗ, ಬೆಂಗಳೂರು, ಮಂಗಳೂರು, ಕೊಡಗು, ಹಾಸನ) |
| 11 | Assistant Director (Statistics) | ನಿಯೋಜನೆ ಮೂಲಕ |
| 12 | Deputy Director, Forest Survey, Demarcation and Mapping | ನಿಯೋಜನೆ ಮೂಲಕ |
| 13 | Assistant Director, Forest Survey, Demarcation and Mapping | ನಿಯೋಜನೆ ಮೂಲಕ |
| 14 | Public Judge (Junior Division) | ನಿಯೋಜನೆ ಮೂಲಕ |
| 15 | Public Relation Officer | ನಿಯೋಜನೆ ಮೂಲಕ |
| 16 | Forest Chemist | ನಿಯೋಜನೆ ಮೂಲಕ |
| 17 | Draughtsman Grade -I | ವೃಂದ ಮತ್ತು ನೇಮಕಾತಿ ನಿಯಮಗಳಂತೆ ಸದರಿ ಹುದ್ದೆಯು 100% ಮುಂಬಡ್ತಿ ಮೂಲಕ ಭರ್ತಿ ಮಾಡಬೇಕಾಗಿದ್ದು, ಅದರಂತೆ ಅರ್ಹತೆ ಮತ್ತು ಸೂಕ್ತತೆಯ ಆಧಾರದ ಮೇಲೆ ಕಾಲ-ಕಾಲಕ್ಕೆ ಬಡ್ತಿ ಪ್ರಕ್ರಿಯೆಯನ್ನು ಕೈಗೊಳ್ಳಲಾಗುತ್ತಿದೆ.<br>ಬಡ್ತಿ: (PR)<br>Non-HK:-ರಾಜ್ಯ ಮಟ್ಟದ ಉಳಿಕೆ ಮೂಲ ವೃಂದದ ದ್ವಿತೀಯ ದರ್ಜೆ ಆಕೃತಿ ರಚನೆಕಾರರುಗಳಿಗೆ ಪ್ರಥಮ ದರ್ಜೆ ಆಕೃತಿ ರಚನೆಕಾರರ ವೃಂದಕ್ಕೆ ಸ್ಥಾನಪನ್ನ ಬಡ್ತಿಗಾಗಿ ಅರ್ಹತೆಯನ್ನು ಪರಿಶೀಲಿಸಲು ದಿನಾಂಕ:02.07.2024ರಂದು ನಡೆದ ಇಲಾಖಾ ಮುಂಬಡ್ತಿ ಸಮಿತಿಯ ಸಭೆಯ ತೀರ್ಮಾನದಂತೆ, ಪ್ರಸ್ತುತ ಅರ್ಹರಿರುವ (01)ಒಂದು ದ್ವಿತೀಯ ದರ್ಜೆ ಆಕೃತಿ ರಚನೆಕಾರರಿಗೆ ಪ್ರಥಮ ದರ್ಜೆ ಆಕೃತಿ ರಚನೆಕಾರರ ಹುದ್ದೆಗೆ ಮುಂಬಡ್ತಿಯನ್ನು ನೀಡಲಾಗಿರುತ್ತದೆ.<br>HK:-ಕಲ್ಯಾಣ-ಕರ್ನಾಟಕ ಸ್ಥಳೀಯ ವೃಂದದ (HK Local Cadre) ಸಿಬ್ಬಂದಿಯೆಂದು ಯಾವುದೇ ಪ್ರಥಮ ದರ್ಜೆ ಆಕೃತಿ ರಚನೆಕಾರರುಗಳನ್ನು ಅಧಿಕೃತವಾಗಿ ಅಧಿಸೂಚಿಸಿರುವುದಿಲ್ಲವಾದ್ದರಿಂದ ಬಡ್ತಿಗೆ ಯಾರೂ ಇರುವುದಿಲ್ಲ. |
| 18 | Draughtsman Grade -II | ವೃಂದ ಮತ್ತು ನೇಮಕಾತಿ ನಿಯಮಗಳಂತೆ ಸದರಿ ಹುದ್ದೆಯು 100% ನೇರ ನೇಮಕಾತಿ ಮೂಲಕ ಭರ್ತಿ ಮಾಡಬೇಕಾಗಿರುತ್ತದೆ. |

| ಕ್ರ. ಸಂ. | ವೃಂದ/ಪದನಾಮ | ನೇರ ನೇಮಕಾತಿ (DR) ಕೋಟಾ ಮತ್ತು ಮುಂಬಡ್ತಿ (PR) ಕೋಟಾದಲ್ಲಿನ ಖಾಲಿ ಹುದ್ದೆಗಳನ್ನು ಭರ್ತಿ ಮಾಡಲು ಕೈಗೊಂಡಿರುವ ಕ್ರಮ |
|---|---|---|
| | | ನೇರ ನೇಮಕಾತಿ (DR) :<br>**Non-HK (22 ಹುದ್ದೆಗಳು) & HK (4) ಹುದ್ದೆಗಳು:-**<br>ದ್ವಿತೀಯ ದರ್ಜೆ ಆಕೃತಿ ರಚನಾಕಾರರು (Draughtsman Grade-II) (ಉಳಿಕೆ ಮೂಲ ವೃಂದ) – 22 ಹುದ್ದೆಗಳು ಮತ್ತು ದ್ವಿತೀಯ ದರ್ಜೆ ಆಕೃತಿ ರಚನಾಕಾರರು (Draughtsman Grade-II) (ಕಲ್ಯಾಣ-ಕರ್ನಾಟಕ ಸ್ಥಳೀಯ ವೃಂದ) – 4 ಹುದ್ದೆಗಳಿಗೆ ನೇರ ನೇಮಕಾತಿ ಮೂಲಕ ಭರ್ತಿ ಮಾಡುವ ಪ್ರಸ್ತಾವನೆಯು ಪರಿಶೀಲನೆಯಲ್ಲಿರುತ್ತದೆ. |
| 19 | Deputy Range Forest Officer-cum- Surveyor | ವೃಂದ ಮತ್ತು ನೇಮಕಾತಿ ನಿಯಮಗಳನ್ವಯ ಸದರಿ ಹುದ್ದೆಯನ್ನು 50% ನೇರ ನೇಮಕಾತಿ ಮತ್ತು 50% ಬಡ್ತಿ ಮೂಲಕ ಭರ್ತಿ ಮಾಡಬೇಕಾಗಿರುತ್ತದೆ.<br>ನೇರ ನೇಮಕಾತಿ:(DR)<br>**Non-HK/ HK:-** 143 ಉಪ ವಲಯ ಅರಣ್ಯಾಧಿಕಾರಿ-ಕಂ-ಮೋಜಣಿದಾರರ ಹುದ್ದೆಗಳನ್ನು ನೇರ ನೇಮಕಾತಿ ಮೂಲಕ ಭರ್ತಿ ಮಾಡಲು ಸಹಮತಿ ನೀಡಲಾಗಿದ್ದು, ಭರ್ತಿ ಮಾಡುವ ಪ್ರಕ್ರಿಯೆ ಚಾಲನೆಯಲ್ಲಿದೆ.<br>ಬಡ್ತಿ: (PR)<br>**Non-HK/ HK**: ಪ್ರಸ್ತುತ ಚಾಲ್ತಿಯಲ್ಲಿರುವ ವೃಂದ ಮತ್ತು ನೇಮಕಾತಿ ನಿಯಮಗಳು ಹಾಗೂ ಜೇಷ್ಠತಾ ಪಟ್ಟಿಯನ್ವಯ ಅರ್ಹತೆ ಮತ್ತು ಸೂಕ್ತತೆಯ ಆಧಾರದ ಮೇಲೆ ಅರ್ಹ ನೌಕರರಿಗೆ ವೃತ್ತ ಮಟ್ಟದಲ್ಲಿ ಕಾಲಕಾಲಕ್ಕೆ ಮುಂಬಡ್ತಿ ನೀಡುವ ಪ್ರಕ್ರಿಯೆ ಕೈಗೊಳ್ಳಲಾಗುತ್ತಿದೆ. |

| ಕ್ರ. ಸಂ. | ವೃಂದ/ಪದನಾಮ | ನೇರ ನೇಮಕಾತಿ (DR) ಕೋಟಾ ಮತ್ತು ಮುಂಬಡ್ತಿ (PR) ಕೋಟಾದಲ್ಲಿನ ಖಾಲಿ ಹುದ್ದೆಗಳನ್ನು ಭರ್ತಿ ಮಾಡಲು ಕೈಗೊಂಡಿರುವ ಕ್ರಮ |
|---|---|---|
| 20 | Forest Guard | ವೃಂದ ಮತ್ತು ನೇಮಕಾತಿ ನಿಯಮಗಳನ್ವಯ ಸದರಿ ಹುದ್ದೆಯನ್ನು 75% ನೇರ ನೇಮಕಾತಿ ಮತ್ತು 25% ಬಡ್ತಿ ಮೂಲಕ ಭರ್ತಿ ಮಾಡಬೇಕಾಗಿರುತ್ತದೆ.<br>ನೇರ ನೇಮಕಾತಿ: (DR)<br>**Non-HK:-** i) ಅರಣ್ಯ ಇಲಾಖೆಯಲ್ಲಿ ಖಾಲಿ ಇರುವ 540 ಗಸ್ತು ಅರಣ್ಯ ಪಾಲಕ (ವೃಂದ ಮತ್ತು ನೇಮಕಾತಿ ನಿಯಮಗಳಂತೆ 'ಅರಣ್ಯ ರಕ್ಷಕ') ಗ್ರೂಪ್ 'ಸಿ' ಹುದ್ದೆಗಳಿಗೆ (506 ಹುದ್ದೆಗಳು + 34 ಹಿಂಬಾಕಿ ಹುದ್ದೆಗಳು=540 ಹುದ್ದೆಗಳು) ಪ್ರಮುಅಸಂ (ಅಪಮು) ರವರ ಕಛೇರಿ ಅಧಿಸೂಚನೆ ಸಂಖ್ಯೆ: KFD/HOFF/B9(RCT)/3/2022-PnR-KFD, ದಿನಾಂಕ: 17.11.2023 ರಲ್ಲಿ ಅಧಿಸೂಚನೆ ಹೊರಡಿಸಲಾಗಿದ್ದು, ನೇರ ನೇಮಕಾತಿ ಪ್ರಕ್ರಿಯೆ ಚಾಲ್ತಿಯಲ್ಲಿರುತ್ತದೆ.<br>ii) ಉಳಿಕೆ ಮೂಲ ವೃಂದದ (Residual Parent Cadre (Non-HK) ನೇರ ನೇಮಕಾತಿ [DR] ಕೋಟಾದಡಿ ಖಾಲಿಯಿರುವ ಗಸ್ತು ವನಪಾಲಕ (ವೃಂದ ಮತ್ತು ನೇಮಕಾತಿ ನಿಯಮಗಳಂತೆ) ನೇರ ನೇಮಕಾತಿ ಕೋಟಾದಡಿ ಪ್ರಸ್ತುತ ಖಾಲಿಯಿರುವ 1278 ಹುದ್ದೆಗಳನ್ನು ಭರ್ತಿ ಮಾಡಲು ಈ ಕಛೇರಿ ಪತ್ರ ಸಂಖ್ಯೆ:KFD/HOFF/B9(RCT)/2/2024-PnR-KFD, ದಿನಾಂಕ:17.08.2024ರಲ್ಲಿ ಸರ್ಕಾರಕ್ಕೆ ಅನುಮೋದನೆಯನ್ನು ಕೋರಲಾಗಿದೆ.<br>HK:- ಕಲ್ಯಾಣ ಕರ್ನಾಟಕ ಸ್ಥಳೀಯ ವೃಂದದಲ್ಲಿ(HK) ನೇರ ನೇಮಕಾತಿ [DR] ಕೋಟಾದಡಿ ಖಾಲಿಯಿರುವ ಗಸ್ತು ವನಪಾಲಕ (ವೃಂದ ಮತ್ತು ನೇಮಕಾತಿ ನಿಯಮಗಳಂತೆ) ನೇರ ನೇಮಕಾತಿ ಕೋಟಾದಡಿ ಪ್ರಸ್ತುತ ಖಾಲಿಯಿರುವ 143 ಹುದ್ದೆಗಳನ್ನು ಭರ್ತಿ ಮಾಡುವ ಪ್ರಸ್ತಾವನೆ ಪರಿಶೀಲನೆಯಲ್ಲಿದೆ.<br>ಬಡ್ತಿ: (PR)<br>Non-HK/ HK:- ಪ್ರಸ್ತುತ ಚಾಲ್ತಿಯಲ್ಲಿರುವ ವೃಂದ ಮತ್ತು ನೇಮಕಾತಿ ನಿಯಮಗಳು ಹಾಗೂ ಜೇಷ್ಠತಾ ಪಟ್ಟಿಯನ್ವಯ ಅರ್ಹತೆ ಮತ್ತು ಸೂಕ್ತತೆಯ ಆಧಾರದ ಮೇಲೆ ಅರ್ಹ ನೌಕರರಿಗೆ ವೃತ್ತ ಮಟ್ಟದಲ್ಲಿ ಮುಂಬಡ್ತಿ ನೀಡುವ ಪ್ರಕ್ರಿಯೆ ಕೈಗೊಳ್ಳಲಾಗುತ್ತಿದೆ. |
| 21 | Assistant Statistical Officer | ನಿಯೋಜನೆ ಮೂಲಕ |
| 22 | Photographer | ನಿಯೋಜನೆ ಮೂಲಕ |
| 23 | Junior Engineer | ನಿಯೋಜನೆ ಮೂಲಕ |
| 24 | Librarian | ನಿಯೋಜನೆ ಮೂಲಕ |
| 25 | Asst. Librarian | ನಿಯೋಜನೆ ಮೂಲಕ |
| 26 | Statistical Inspector | ನಿಯೋಜನೆ ಮೂಲಕ |

| ಕ್ರ. ಸಂ. | ವೃಂದ/ಪದನಾಮ | ನೇರ ನೇಮಕಾತಿ (DR) ಕೋಟಾ ಮತ್ತು ಮುಂಬಡ್ತಿ (PR) ಕೋಟಾದಲ್ಲಿನ ಖಾಲಿ ಹುದ್ದೆಗಳನ್ನು ಭರ್ತಿ ಮಾಡಲು ಕೈಗೊಂಡಿರುವ ಕ್ರಮ |
|---|---|---|
| 27 | PT Instructor | ನಿಯೋಜನೆ ಮೂಲಕ |
| 28 | Senior Driver | ವೃಂದ ಮತ್ತು ನೇಮಕಾತಿ ನಿಯಮಗಳಂತೆ ಸದರಿ ಹುದ್ದೆಯು 100% ಮುಂಬಡ್ತಿ ಮೂಲಕ ಭರ್ತಿ ಮಾಡಬೇಕಾಗಿದ್ದು, ಅದರಂತೆ ಅರ್ಹತೆ ಮತ್ತು ಸೂಕ್ತತೆಯ ಆಧಾರದ ಮೇಲೆ ಕಾಲ-ಕಾಲಕ್ಕೆ ಬಡ್ತಿ ಪ್ರಕ್ರಿಯೆಯನ್ನು ಕೈಗೊಳ್ಳಲಾಗುತ್ತಿದೆ.<br>ಬಡ್ತಿ: (PR)<br>**Non-HK**:-ರಾಜ್ಯ ಮಟ್ಟದ ಉಳಿಕೆ ಮೂಲ ವೃಂದದ ವಾಹನ ಚಾಲಕರುಗಳಿಗೆ ಹಿರಿಯ ವಾಹನ ಚಾಲಕ ವೃಂದಕ್ಕೆ ಸ್ಥಾನಪನ್ನ ಬಡ್ತಿಗಾಗಿ ಅರ್ಹತೆಯನ್ನು ಪರಿಶೀಲಿಸಲು ದಿನಾಂಕ:11.11.2024ರಂದು ನಡೆದ ಇಲಾಖಾ ಮುಂಬಡ್ತಿ ಸಮಿತಿಯ ಸಭೆಯ ತೀರ್ಮಾನದಂತೆ, ಪ್ರಸ್ತುತ ಅರ್ಹರಿರುವ 03 ವಾಹನ ಚಾಲಕರುಗಳಿಗೆ ಹಿರಿಯ ವಾಹನ ಚಾಲಕ ಹುದ್ದೆಗೆ ಮುಂಬಡ್ತಿಯನ್ನು ನೀಡಲಾಗಿರುತ್ತದೆ.<br>**HK**:- ಕಲ್ಯಾಣ-ಕರ್ನಾಟಕ ಸ್ಥಳೀಯ ವೃಂದದ (HK Local Cadre) ಸಿಬ್ಬಂದಿಯೆಂದು ಯಾವುದೇ ಹಿರಿಯ ವಾಹನ ಚಾಲಕ ಸಿಬ್ಬಂದಿಗಳನ್ನು ಅಧಿಕೃತವಾಗಿ ಅಧಿಸೂಚಿಸಿರುವುದಿಲ್ಲವಾದ್ದರಿಂದ ಬಡ್ತಿಗೆ ಯಾರೂ ಇರುವುದಿಲ್ಲ. |
| 29 | Driver | ವಾಹನ ಚಾಲಕ ಹುದ್ದೆಗಳನ್ನು ಹೊರಗುತ್ತಿಗೆ ಮೂಲಕ ಭರ್ತಿ ಮಾಡಲು ಕ್ರಮವಹಿಲಾಗುತ್ತಿದೆ. |
| 30 | Police Constable | ನಿಯೋಜನೆ ಮೂಲಕ |
| 31 | Forest Settlement Officer | ನಿಯೋಜನೆ ಮೂಲಕ |
| 32 | Superintendent (Forest Survey) | ನಿಯೋಜನೆ ಮೂಲಕ |
| 33 | Finance Assistant | ನಿಯೋಜನೆ ಮೂಲಕ |
| 34 | Accounts Superintendent | ನಿಯೋಜನೆ ಮೂಲಕ |
| 35 | Superintendent | ವೃಂದ ಮತ್ತು ನೇಮಕಾತಿ ನಿಯಮಗಳನ್ವಯ ಸದರಿ ಹುದ್ದೆಯನ್ನು 100% ಮುಂಬಡ್ತಿ ಮೂಲಕ ಭರ್ತಿ ಮಾಡಬೇಕಾಗಿರುತ್ತದೆ.<br>ಬಡ್ತಿ (PR):<br>**Non-HK**:-<br>ಉಳಿಕೆ ಮೂಲ ವೃಂದದ ಪ್ರಥಮ ದರ್ಜೆ ಸಹಾಯಕರ ರಾಜ್ಯ ಮಟ್ಟದ ಜ್ಯೇಷ್ಠತಾಪಟ್ಟಿಯನ್ನು ಕೆ.ಎಸ್.ಎ.ಟಿ. ಅರ್ಜಿ ಸಂಖ್ಯೆ: 3386 to 3406/2021 c/w 3062 to 3077/2021 ರಲ್ಲಿ ಆದೇಶ ದಿನಾಂಕ: 30.09.2022ರಲ್ಲಿ set aside ಆಗಿರುತ್ತದೆ. ಸದರಿ ಆದೇಶದನ್ವಯ ದಿನಾಂಕ:24/25.02.2025ರಂದು ಇತ್ತೀಚೆಗೆ ಅಂತಿಮ ಜ್ಯೇಷ್ಠತಾ ಪಟ್ಟಿಯನ್ನು ಪ್ರಕಟಿಸಿದ್ದು, ಸದರಿ ಪಟ್ಟಿಯ ಕುರಿತು ಬರಬಹುದಾದ ನ್ಯಾಯಾಲಯ ಪ್ರಕರಣಗಳನ್ನು ಗಮನಿಸಿ ಅರ್ಹ ಪ್ರಥಮ |

| ಕ್ರ. ಸಂ. | ವೃಂದ/ಪದನಾಮ | ನೇರ ನೇಮಕಾತಿ (DR) ಕೋಟಾ ಮತ್ತು ಮುಂಬಡ್ತಿ (PR) ಕೋಟಾದಲ್ಲಿನ ಖಾಲಿ ಹುದ್ದೆಗಳನ್ನು ಭರ್ತಿ ಮಾಡಲು ಕೈಗೊಂಡಿರುವ ಕ್ರಮ |
|---|---|---|
| | | ದರ್ಜೆ ಸಹಾಯಕರು ಮತ್ತು ಶೀಘ್ರಲಿಪಿಗಾರ ವೃಂದದಿಂದ ಬಡ್ತಿ ಪ್ರಕ್ರಿಯೆಯನ್ನು ಕೈಗೊಳ್ಳಲು ಸಾದ್ಯವಾಗುತ್ತದೆ.<br>HK:-<br>ಕಲ್ಯಾಣ ಕರ್ನಾಟಕ ಸ್ಥಳೀಯ ವೃಂದಕ್ಕೆ ಸಂಬಂಧಿಸಿದಂತೆ, ದಿನಾಂಕ:11.11.2024 ರಂದು ನಡೆದ ಇಲಾಖಾ ಮುಂಬಡ್ತಿ ಸಮಿತಿ ಸಭೆಯಲ್ಲಿನ ತೀರ್ಮಾನದನ್ವಯ 5 ಪ್ರಥಮ ದರ್ಜೆ ಸಹಾಯಕರುಗಳಿಗೆ ಅಧೀಕ್ಷಕರುಗಳ ವೃಂದಕ್ಕೆ ಮುಂಬಡ್ತಿ ನೀಡಲಾಗಿರುತ್ತದೆ. |
| 36 | First Division Assistant | ವೃಂದ ಮತ್ತು ನೇಮಕಾತಿ ನಿಯಮಗಳನ್ವಯ ಸದರಿ ಹುದ್ದೆಯನ್ನು 50% ನೇರ ನೇಮಕಾತಿ ಮತ್ತು 50% ಬಡ್ತಿ ಮೂಲಕ ಭರ್ತಿ ಮಾಡಬೇಕಾಗಿರುತ್ತದೆ.<br>ನೇರ ನೇಮಕಾತಿ (DR):<br>Non-HK:-<br>ಕರ್ನಾಟಕ ಲೋಕಸೇವಾ ಆಯೋಗವು ಅಭಿವೃದ್ಧಿ ಪಡಿಸಿರುವ KPSC-Udyoga (Integrated Pre-Examination Software)ರ ಮುಖಾಂತರ ಪ್ರಥಮ ದರ್ಜೆ ಸಹಾಯಕ (ಉಳಿಕೆ ಮೂಲ ವೃಂದ-Residual Parent Cadre) – 56 ಹುದ್ದೆಗಳು (46 ಹುದ್ದೆಗಳು+10 ಬ್ಯಾಕ್‌ಲಾಗ್) ಗಳನ್ನು ನೇರ ನೇಮಕಾತಿ ಮೂಲಕ ಭರ್ತಿ ಮಾಡಿಕೊಳ್ಳಲು ಪ್ರಸ್ತಾವನೆಯನ್ನು ಕರ್ನಾಟಕ ಲೋಕ ಸೇವಾ ಆಯೋಗಕ್ಕೆ ದಿನಾಂಕ: 17.04.2024ರಲ್ಲಿ ಆನ್‌ಲೈನ್‌ನಲ್ಲಿ ಸಲ್ಲಿಸಿದ್ದು, ಆದರೆ ಹೊಸ ನೇಮಕಾತಿ ಅಧಿಸೂಚನೆಗಳನ್ನು ಜಾರಿಗೊಳಿಸುವುದನ್ನು ತಾತ್ಕಾಲಿಕವಾಗಿ ಮುಂದೂಡಿದೆ.<br>HK:-<br>ಕರ್ನಾಟಕ ಲೋಕಸೇವಾ ಆಯೋಗವು ಅಭಿವೃದ್ಧಿ ಪಡಿಸಿರುವ KPSC-Udyoga (Integrated Pre-Examination Software)ರ ಮುಖಾಂತರ ಪ್ರಥಮ ದರ್ಜೆ ಸಹಾಯಕ (ಕಲ್ಯಾಣ-ಕರ್ನಾಟಕ ಸ್ಥಳೀಯ ವೃಂದ) – 18 ಹುದ್ದೆ (14 ಹುದ್ದೆಗಳು+4 ಬ್ಯಾಕ್‌ಲಾಗ್) ಗಳನ್ನು ನೇರ ನೇಮಕಾತಿ ಮೂಲಕ ಭರ್ತಿ ಮಾಡಿಕೊಳ್ಳಲು ಪ್ರಸ್ತಾವನೆಯನ್ನು ಕರ್ನಾಟಕ ಲೋಕ ಸೇವಾ ಆಯೋಗಕ್ಕೆ ದಿನಾಂಕ: 17.04.2024ರಲ್ಲಿ ಆನ್‌ಲೈನ್‌ನಲ್ಲಿ ಸಲ್ಲಿಸಿದ್ದು, ಆದರೆ ಹೊಸ ನೇಮಕಾತಿ ಅಧಿಸೂಚನೆಗಳನ್ನು ಜಾರಿಗೊಳಿಸುವುದನ್ನು ತಾತ್ಕಾಲಿಕವಾಗಿ ಮುಂದೂಡಿದೆ.<br>ಬಡ್ತಿ (PR):<br>Non-HK:-<br>ರಾಜ್ಯ ಮಟ್ಟದ ಉಳಿಕೆ ಮೂಲ ವೃಂದದ ದ್ವಿತೀಯ ದರ್ಜೆ ಸಹಾಯಕರುಗಳಿಗೆ ದಿನಾಂಕ:02.07.2024 ರಂದು ನಡೆದ ಇಲಾಖಾ ಮುಂಬಡ್ತಿ ಸಮಿತಿ ಸಭೆಯಲ್ಲಿನ ತೀರ್ಮಾನದನ್ವಯ, ದಿನಾಂಕ: 13.08.2024ರಂದು 51 ಮತ್ತು ದಿನಾಂಕ: 07.12.2024 ರಂದು 7 ದ್ವಿತೀಯ ದರ್ಜೆ ಸಹಾಯಕರುಗಳಿಗೆ ಪ್ರಥಮ ದರ್ಜೆ ಸಹಾಯಕರ ವೃಂದಕ್ಕೆ ಮುಂಬಡ್ತಿ ನೀಡಲಾಗಿರುತ್ತದೆ.<br>HK:-<br>ಕಲ್ಯಾಣ ಕರ್ನಾಟಕ ಸ್ಥಳೀಯ ವೃಂದದ ದ್ವಿತೀಯ ದರ್ಜೆ ಸಹಾಯಕರುಗಳಿಗೆ ದಿನಾಂಕ:02.07.2024 ರಂದು ನಡೆದ ಇಲಾಖಾ ಮುಂಬಡ್ತಿ ಸಮಿತಿ ಸಭೆಯಲ್ಲಿನ ತೀರ್ಮಾನದನ್ವಯ, ದಿನಾಂಕ: 13.08.2024ರಂದು 2 ದ್ವಿತೀಯ ದರ್ಜೆ ಸಹಾಯಕರುಗಳಿಗೆ ಪ್ರಥಮ ದರ್ಜೆ ಸಹಾಯಕರ ವೃಂದಕ್ಕೆ ಮುಂಬಡ್ತಿ ನೀಡಲಾಗಿರುತ್ತದೆ. ಉಳಿದ ಖಾಲಿ ಹುದ್ದೆಗಳಿಗೆ ಅರ್ಹ ನೌಕರರು ಲಭ್ಯವಿರುವುದಿಲ್ಲ. |

| ಕ್ರ. ಸಂ. | ವೃಂದ/ಪದನಾಮ | ನೇರ ನೇಮಕಾತಿ (DR) ಕೋಟಾ ಮತ್ತು ಮುಂಬಡ್ತಿ (PR) ಕೋಟಾದಲ್ಲಿನ ಖಾಲಿ ಹುದ್ದೆಗಳನ್ನು ಭರ್ತಿ ಮಾಡಲು ಕೈಗೊಂಡಿರುವ ಕ್ರಮ |
|---|---|---|
| 37 | Stenographers | ವೃಂದ ಮತ್ತು ನೇಮಕಾತಿ ನಿಯಮಗಳನ್ವಯ ಸದರಿ ಹುದ್ದೆಯನ್ನು 50% ನೇರ ನೇಮಕಾತಿ ಮತ್ತು 50% ಬಡ್ತಿ ಮೂಲಕ ಭರ್ತಿ ಮಾಡಬೇಕಾಗಿರುತ್ತದೆ.<br>ನೇರ ನೇಮಕಾತಿ (DR):-<br>Non-HK:-<br>ಶೀಘ್ರಲಿಪಿಗಾರರ ಹುದ್ದೆಗಳನ್ನು ನೇರ ನೇಮಕಾತಿ ಮೂಲಕ ಭರ್ತಿ ಮಾಡುವ ಪ್ರಸ್ತಾವನೆಯನ್ನು ಆರ್ಥಿಕ ಇಲಾಖೆಯು ಅನುಮೋದಿಸಿರುವುದಿಲ್ಲ.<br>HK:-<br>ಶೀಘ್ರಲಿಪಿಗಾರರ ಹುದ್ದೆಗಳನ್ನು ನೇರ ನೇಮಕಾತಿ ಮೂಲಕ ಭರ್ತಿ ಮಾಡುವ ಪ್ರಸ್ತಾವನೆಯನ್ನು ಆರ್ಥಿಕ ಇಲಾಖೆಯು ಅನುಮೋದಿಸಿರುವುದಿಲ್ಲ.<br>ಬಡ್ತಿ (PR):-<br>Non-HK:-<br>ದಿನಾಂಕ:02.07.2024 ರಂದು ನಡೆದ ಅರಣ್ಯ ಇಲಾಖೆಯಲ್ಲಿ ರಾಜ್ಯ ಮಟ್ಟದ ಉಳಿಕೆ ಮೂಲ ವೃಂದದ ಮುಂಬಡ್ತಿ ಸಮಿತಿ ಸಭೆಯಲ್ಲಿನ ತೀರ್ಮಾನದನ್ವಯ, ಯಾವುದೇ ಖಾಲಿ ಹುದ್ದೆಗಳು ಮುಂಬಡ್ತಿ ಕೋಟಾದಲ್ಲಿ ಲಭ್ಯವಾಗಿಲ್ಲವಾದರಿಂದ ಯಾವ ನೌಕರರನ್ನು ಮುಂಬಡ್ತಿಗೆ ಪರಿಗಣಿಸಿರುವುದಿಲ್ಲ.<br>HK:-<br>ದಿನಾಂಕ:02.07.2024 ರಂದು ನಡೆದ ಅರಣ್ಯ ಇಲಾಖೆಯಲ್ಲಿ ಕಲ್ಯಾಣ ಕರ್ನಾಟಕ ಸ್ಥಳಿಯ ವೃಂದದ ಮುಂಬಡ್ತಿ ಸಮಿತಿ ಸಭೆಯಲ್ಲಿನ ತೀರ್ಮಾನದನ್ವಯ, ಯಾವುದೇ ಖಾಲಿ ಹುದ್ದೆಗಳು ಮುಂಬಡ್ತಿ ಕೋಟಾದಲ್ಲಿ ಲಭ್ಯವಾಗಿಲ್ಲವಾದರಿಂದ ಯಾವ ನೌಕರರನ್ನು ಮುಂಬಡ್ತಿಗೆ ಪರಿಗಣಿಸಿರುವುದಿಲ್ಲ. |
| 38 | Senior Typist | ವೃಂದ ಮತ್ತು ನೇಮಕಾತಿ ನಿಯಮಗಳಂತೆ ಸದರಿ ಹುದ್ದೆಯು 100% ಮುಂಬಡ್ತಿ ಮೂಲಕ ಭರ್ತಿ ಮಾಡಬೇಕಾಗಿದ್ದು, ಅರ್ಹತೆ ಮತ್ತು ಸೂಕ್ತತೆಯ ಆಧಾರದ ಮೇಲೆ ಕಾಲ-ಕಾಲಕ್ಕೆ ಬಡ್ತಿ ಪ್ರಕ್ರಿಯೆಯನ್ನು ಕೈಗೊಳ್ಳಲಾಗುತ್ತಿದೆ.<br>ಬಡ್ತಿ (PR):-<br>Non-HK:- ದಿನಾಂಕ:02.07.2024 ರಂದು ನಡೆದ ಅರಣ್ಯ ಇಲಾಖೆಯಲ್ಲಿ ರಾಜ್ಯ ಮಟ್ಟದ ಉಳಿಕೆ ಮೂಲ ವೃಂದದ ಮುಂಬಡ್ತಿ ಸಮಿತಿ ಸಭೆಯಲ್ಲಿನ ತೀರ್ಮಾನದನ್ವಯ, ಯಾವ ಅರ್ಹ ಬೆರಳಚ್ಚುಗಾರರು ಲಭ್ಯವಿಲ್ಲರುವುದಿಲ್ಲವಾದರಿಂದ ಮುಂಬಡ್ತಿಗೆ ಪರಿಗಣಿಸಿರುವುದಿಲ್ಲ.<br>HK:- ದಿನಾಂಕ:02.07.2024 ರಂದು ನಡೆದ ಅರಣ್ಯ ಇಲಾಖೆಯಲ್ಲಿ ಕಲ್ಯಾಣ ಕರ್ನಾಟಕ ಸ್ಥಳಿಯ ವೃಂದದ ಮುಂಬಡ್ತಿ ಸಮಿತಿ ಸಭೆಯಲ್ಲಿನ ತೀರ್ಮಾನದನ್ವಯ, ಯಾವ ಬೆರಳಚ್ಚುಗಾರರು ಲಭ್ಯವಿಲ್ಲರುವುದಿಲ್ಲವಾದರಿಂದ ಮುಂಬಡ್ತಿಗೆ ಪರಿಗಣಿಸಿರುವುದಿಲ್ಲ. |

| ಕ್ರ. ಸಂ. | ವೃಂದ/ಪದನಾಮ | ನೇರ ನೇಮಕಾತಿ (DR) ಕೋಟಾ ಮತ್ತು ಮುಂಬಡ್ತಿ (PR) ಕೋಟಾದಲ್ಲಿನ ಖಾಲಿ ಹುದ್ದೆಗಳನ್ನು ಭರ್ತಿ ಮಾಡಲು ಕೈಗೊಂಡಿರುವ ಕ್ರಮ |
|---|---|---|
| 39 | Second Division Assistant | ವೃಂದ ಮತ್ತು ನೇಮಕಾತಿ ನಿಯಮಗಳನ್ವಯ ಸದರಿ ಹುದ್ದೆಯನ್ನು 67% ನೇರ ನೇಮಕಾತಿ ಮತ್ತು 33% ಬಡ್ತಿ ಮೂಲಕ ಭರ್ತಿ ಮಾಡಬೇಕಾಗಿರುತ್ತದೆ.<br>ನೇರ ನೇಮಕಾತಿ (DR):-<br>Non-HK:-<br>(i) 45 ಹುದ್ದೆಗಳು:- ಕರ್ನಾಟಕ ಲೋಕಸೇವಾ ಆಯೋಗವು ಅಭಿವೃದ್ಧಿ ಪಡಿಸಿರುವ KPSC-Udyoga (Integrated Pre-Examination Software)ರ ಮುಖಾಂತರ ಸರ್ಕಾರದ ಪತ್ರ ಸಂಖ್ಯೆ: ಅಪಜೀ 284 ಅಪಸೇ 2018, ದಿನಾಂಕ: 20.09.2019 (45 ಹುದ್ದೆಗಳು) ರನ್ವಯ ಪ್ರಸ್ತಾವನೆಯನ್ನು ಕರ್ನಾಟಕ ಲೋಕಸೇವಾ ಆಯೋಗಕ್ಕೆ ದಿನಾಂಕ:08.05.2024ರಂದು ಆನ್‌ಲೈನ್ ಮೂಲಕ ಸಲ್ಲಿಸಲಾಗಿರುತ್ತದೆ.<br>(ii) 123 ಹುದ್ದೆಗಳು:- ರಾಜ್ಯ ಮಟ್ಟದ ಉಳಿಕೆ ಮೂಲ ವೃಂದದ ದ್ವಿತೀಯ ದರ್ಜೆ ಸಹಾಯಕರ ನೇರ ನೇಮಕಾತಿ ಕೋಟಾದ 123 ಖಾಲಿ ಹುದ್ದೆಗಳನ್ನು ಭರ್ತಿ ಮಾಡುವ ಪ್ರಸ್ತಾವನೆಯು ಪರಿಶೀಲನೆಯಲ್ಲಿರುತ್ತದೆ.<br>HK:-<br>ಕಲ್ಯಾಣ ಕರ್ನಾಟಕ ಪ್ರದೇಶದ ಸ್ಥಳೀಯ ವೃಂದದ ನೇರ ನೇಮಕಾತಿ ಖಾಲಿ ಹುದ್ದೆಗಳನ್ನು ಭರ್ತಿ ಮಾಡಲು ಅನುಮತಿ ನೀಡಲಾಗಿದ್ದು, ಪ್ರಕ್ರಿಯೆ ಚಾಲನೆಯಲ್ಲಿದೆ.<br>ಬಡ್ತಿ (PR):-<br>ಪ್ರಸ್ತುತ ಚಾಲ್ತಿಯಲ್ಲಿರುವ ವೃಂದ ಮತ್ತು ನೇಮಕಾತಿ ನಿಯಮಗಳು ಹಾಗೂ ಜೇಷ್ಠತಾ ಪಟ್ಟಿಯನ್ವಯ ಅರ್ಹತೆ ಮತ್ತು ಸೂಕ್ತತೆಯ ಆಧಾರದ ಮೇಲೆ ಅರ್ಹ ನೌಕರರಿಗೆ ಕಾಲ-ಕಾಲಕ್ಕೆ ವೃತ್ತ ಕಛೇರಿಗಳ ಹಂತದಲ್ಲಿ ಮುಂಬಡ್ತಿ ನೀಡುವ ಪ್ರಕ್ರಿಯೆ ಕೈಗೊಳ್ಳಲಾಗುತ್ತಿದೆ.<br>ಅರಣ್ಯ ಭವನದ ವಿವಿಧ ಘಟಕ ಕಛೇರಿಗಳಲ್ಲಿನ ಗ್ರೂಪ್-ಡಿ ವೃಂದದಿಂದ ದ್ವಿತೀಯ ದರ್ಜೆ ಸಹಾಯಕ ವೃಂದಕ್ಕೆ 02 ನೌಕರರು ಮುಂಬಡ್ತಿಗೆ ಅರ್ಹರಿದ್ದು, ದಿನಾಂಕ:30.12.2024ರಂದು ಮುಂಬಡ್ತಿ ಆದೇಶ ನೀಡಲಾಗಿರುತ್ತದೆ. |
| 40 | Typist | ವೃಂದ ಮತ್ತು ನೇಮಕಾತಿ ನಿಯಮಗಳನ್ವಯ ಸದರಿ ಹುದ್ದೆಯನ್ನು 100% ನೇರ ನೇಮಕಾತಿ ಮೂಲಕ ಭರ್ತಿ ಮಾಡಬೇಕಾಗಿರುತ್ತದೆ<br>ನೇರ ನೇಮಕಾತಿ (DR):-<br>Non-HK & HK:- ಬೆರಳಚ್ಚುಗಾರರ ಹುದ್ದೆಗಳನ್ನು ಹೊರಗುತ್ತಿಗೆ ಆಧಾರದ ಮೇಲೆ ಭರ್ತಿ ಮಾಡಲಾಗಿದೆ. |
| 41 | Elephant Jamedar | ವೃಂದ ಮತ್ತು ನೇಮಕಾತಿ ನಿಯಮಗಳಂತೆ ಸದರಿ ಹುದ್ದೆಯು 100% ಮುಂಬಡ್ತಿ ಮೂಲಕ ಭರ್ತಿ ಮಾಡಬೇಕಾಗಿದ್ದು, ಅರ್ಹತೆ ಮತ್ತು ಸೂಕ್ತತೆಯ ಆಧಾರದ ಮೇಲೆ ಕಾಲ-ಕಾಲಕ್ಕೆ ವೃತ್ತ ಮಟ್ಟದಲ್ಲಿ ಬಡ್ತಿ ಪ್ರಕ್ರಿಯೆಯನ್ನು ಕೈಗೊಳ್ಳಲಾಗುತ್ತಿದೆ. |
| 42 | Film Projector Operator | ನಿಯೋಜನೆ ಮೂಲಕ |
| 43 | Crane Operator | ನಿಯೋಜನೆ ಮೂಲಕ |

| ಕ್ರ. ಸಂ. | ವೃಂದ/ಪದನಾಮ | ನೇರ ನೇಮಕಾತಿ (DR) ಕೋಟಾ ಮತ್ತು ಮುಂಬಡ್ತಿ (PR) ಕೋಟಾದಲ್ಲಿನ ಖಾಲಿ ಹುದ್ದೆಗಳನ್ನು ಭರ್ತಿ ಮಾಡಲು ಕೈಗೊಂಡಿರುವ ಕ್ರಮ |
|---|---|---|
| | | |
| 44 | Elephant Mahout | ವೃಂದ ಮತ್ತು ನೇಮಕಾತಿ ನಿಯಮಗಳಂತೆ ಸದರಿ ಹುದ್ದೆಯು 100% ಮುಂಬಡ್ತಿ ಮೂಲಕ ಭರ್ತಿ ಮಾಡಬೇಕಾಗಿದ್ದು, ಅರ್ಹತೆ ಮತ್ತು ಸೂಕ್ತತೆಯ ಆಧಾರದ ಮೇಲೆ ಕಾಲ-ಕಾಲಕ್ಕೆ ವೃತ್ತ ಮಟ್ಟದಲ್ಲಿ ಬಡ್ತಿ ಪ್ರಕ್ರಿಯೆಯನ್ನು ಕೈಗೊಳ್ಳಲಾಗುತ್ತಿದೆ. |
| 45 | Elephant Kawadi | ವೃಂದ ಮತ್ತು ನೇಮಕಾತಿ ನಿಯಮಗಳನ್ವಯ ಸದರಿ ಹುದ್ದೆಯನ್ನು 100 % ನೇರ ನೇಮಕಾತಿ ಮೂಲಕ ಭರ್ತಿ ಮಾಡಬೇಕಾಗಿರುತ್ತದೆ.<br>ನೇರ ನೇಮಕಾತಿ:(DR)<br>Non-HK:-<br>i) ಅರಣ್ಯ ಇಲಾಖೆಯಲ್ಲಿ ಆನೆ ಕವಾಡಿ ವೃಂದದ ಉಳಿಕೆ ಮೂಲ ವೃಂದದಲ್ಲಿ ಖಾಲಿಯಿರುವ 19+3 ಹಿಂಬಾಕಿ ಹುದ್ದೆಗಳು ಒಟ್ಟು=22 ಹುದ್ದೆಗಳಿಗೆ ವೃಂದ ಮತ್ತು ನೇಮಕಾತಿ ನಿಯಮಗಳನ್ವಯ ಮಾರ್ಚ್, 2023ರ ಮಾಹೆಯಲ್ಲಿ ಇಲಾಖೆಯ ಚಾಮರಾಜನಗರ, ಕೊಡಗು, ಮೈಸೂರು, ಶಿವಮೊಗ್ಗ ಮತ್ತು ಕೆನರಾ ವೃತ್ತಗಳಲ್ಲಿ ನೇರ ನೇಮಕಾತಿ ಅಧಿಸೂಚನೆಯನ್ನು ಹೊರಡಿಸಲಾಗಿರುತ್ತದೆ. ಅದರಂತೆ ನೇರ ನೇಮಕಾತಿ ಪ್ರಕ್ರಿಯೆ ಪೂರ್ಣಗೊಂಡಿರುತ್ತದೆ.<br>ii) ಅರಣ್ಯ ಇಲಾಖೆಯ ಆನೆ ಕವಾಡಿಗ ವೃಂದದಲ್ಲಿ ಖಾಲಿಯಿರುವ 50 ಹುದ್ದೆಗಳು(=44 ಸಾಮಾನ್ಯ ಹುದ್ದೆಗಳು+6 ಹಿಂಬಾಕಿ ಹುದ್ದೆಗಳು) ನೇರ ನೇಮಕಾತಿ ಮೂಲಕ ಭರ್ತಿ ಮಾಡುವ ಪ್ರಸ್ತಾವನೆಯು ಪರಿಶೀಲನೆಯಲ್ಲಿದೆ. |
| 46 | Forest Watcher | ವೃಂದ ಮತ್ತು ನೇಮಕಾತಿ ನಿಯಮಗಳನ್ವಯ ಸದರಿ ಹುದ್ದೆಯನ್ನು 75% ನೇರ ನೇಮಕಾತಿ ಮತ್ತು 25% ಬಡ್ತಿ ಮೂಲಕ ಭರ್ತಿ ಮಾಡಬೇಕಾಗಿರುತ್ತದೆ.<br>ನೇರ ನೇಮಕಾತಿ: (DR)<br>Non-HK/ HK :-ಅರಣ್ಯ ಇಲಾಖೆಯಲ್ಲಿ ಖಾಲಿ ಇರುವ 413 ಅರಣ್ಯ ವೀಕ್ಷಕ ಹುದ್ದೆಗಳಲ್ಲಿ ವೃಂದ ಮತ್ತು ನೇಮಕಾತಿ ನಿಯಮಾನುಸಾರ ಲಭ್ಯವಾಗುವ 310 ಹುದ್ದೆಗಳಿಗೆ ನೇರ ನೇಮಕಾತಿ ಮುಖಾಂತರ ಭರ್ತಿ ಮಾಡಿಕೊಳ್ಳಲು ನೇರ ನೇಮಕಾತಿ ಅಧಿಸೂಚನೆಯನ್ನು ಸೆಪ್ಟೆಂಬರ್ 2023ರ ಮಾಹೆಯಲ್ಲಿ ಅರಣ್ಯ ಇಲಾಖೆಯ ವಿವಿಧ ವೃತ್ತಗಳ ಹಂತದಲ್ಲಿ ಹೊರಡಿಸಿದ್ದು, 270 ಹುದ್ದೆಗಳನ್ನು ಈಗಾಗಲೇ ಭರ್ತಿ ಮಾಡಲಾಗಿದ್ದು, ಉಳಿದಿರುವ ಹುದ್ದೆಗಳನ್ನು ಭರ್ತಿ ಮಾಡಲು ಪ್ರಕ್ರಿಯೆಯು ಚಾಲ್ತಿಯಲ್ಲಿರುತ್ತವೆ.<br><br>Non-HK:- ಉಳಿಕೆ ಮೂಲ ವೃಂದದ (Residual Parent Cadre (Non-HK) ನೇರ ನೇಮಕಾತಿ [DR] ಕೋಟಾದಡಿ ಖಾಲಿಯಿರುವ 901 ಗ್ರೂಪ್ 'ಡಿ' ವೃಂದದ ಅರಣ್ಯ ವೀಕ್ಷಕ (Forest Watcher) ಹುದ್ದೆಗಳನ್ನು ನೇರ ನೇಮಕಾತಿ ಪ್ರಕ್ರಿಯೆ ಮೂಲಕ ಭರ್ತಿ ಮಾಡಿಕೊಳ್ಳುವ ಪ್ರಸ್ತಾವನೆ ಪರಿಶೀಲನೆಯಲ್ಲಿದೆ.<br><br>HK:- ಕಲ್ಯಾಣ ಕರ್ನಾಟಕ ಪ್ರದೇಶದ ಸ್ಥಳೀಯ ವೃಂದದ[HK] ನೇರ ನೇಮಕಾತಿ (DR) ಕೋಟಾದಡಿ ಖಾಲಿಯಿರುವ 48 ಗ್ರೂಪ್ 'ಡಿ' ವೃಂದದ ಅರಣ್ಯ ವೀಕ್ಷಕ (Forest Watcher) ಹುದ್ದೆಗಳನ್ನು ನೇರ ನೇಮಕಾತಿ ಪ್ರಕ್ರಿಯೆ ಮೂಲಕ ಭರ್ತಿ ಮಾಡಿಕೊಳ್ಳುವ ಪ್ರಸ್ತಾವನೆ ಪರಿಶೀಲನೆಯಲ್ಲಿದೆ. |

| ಕ್ರ. ಸಂ. | ವೃಂದ/ಪದನಾಮ | ನೇರ ನೇಮಕಾತಿ (DR) ಕೋಟಾ ಮತ್ತು ಮುಂಬಡ್ತಿ (PR) ಕೋಟಾದಲ್ಲಿನ ಖಾಲಿ ಹುದ್ದೆಗಳನ್ನು ಭರ್ತಿ ಮಾಡಲು ಕೈಗೊಂಡಿರುವ ಕ್ರಮ |
|---|---|---|
| | | ಬಡ್ತಿ:(PR)<br>ಪ್ರಸ್ತುತ ಚಾಲ್ತಿಯಲ್ಲಿರುವ ವೃಂದ ಮತ್ತು ನೇಮಕಾತಿ ನಿಯಮಗಳು ಹಾಗೂ ಜೇಷ್ಠತಾ ಪಟ್ಟಿಯನ್ವಯ ಅರ್ಹತೆ ಮತ್ತು ಸೂಕ್ತತೆಯ ಆಧಾರದ ಮೇಲೆ ಅರ್ಹ ನೌಕರರಿಗೆ ವೃತ್ತ ಮಟ್ಟದಲ್ಲಿ ಕಾಲ-ಕಾಲಕ್ಕೆ ಮುಂಬಡ್ತಿ ನೀಡುವ ಪ್ರಕ್ರಿಯೆ ಕೈಗೊಳ್ಳಲಾಗುತ್ತಿದೆ. |
| 47 | Attenders / Daftarband/ Jamedar / Lift Attender / Pumpset Operator / Wireless mechanic | ವೃಂದ ಮತ್ತು ನೇಮಕಾತಿ ನಿಯಮಗಳಂತೆ ಸದರಿ ಹುದ್ದೆಯು 100% ಮುಂಬಡ್ತಿ ಮೂಲಕ ಭರ್ತಿ ಮಾಡಬೇಕಾಗಿದ್ದು, ಅರ್ಹತೆ ಮತ್ತು ಸೂಕ್ತತೆಯ ಆಧಾರದ ಮೇಲೆ ಕಾಲ-ಕಾಲಕ್ಕೆ ಬಡ್ತಿ ಪ್ರಕ್ರಿಯೆಯನ್ನು ಕೈಗೊಳ್ಳಲಾಗುತ್ತಿದೆ.<br>ಬಡ್ತಿ (PR):-<br>Non-HK:- ದಿನಾಂಕ:02.07.2024 ರಂದು ನಡೆದ ಅರಣ್ಯ ಭವನದ ರಾಜ್ಯ ಮಟ್ಟದ ಉಳಿಕೆ ಮೂಲ ವೃಂದದ ಮುಂಬಡ್ತಿ ಸಮಿತಿ ಸಭೆಯಲ್ಲಿನ ತೀರ್ಮಾನದನ್ವಯ, ದಿನಾಂಕ: 26.07.2024ರಂದು 4 ಗ್ರೂಪ್-ಡಿ ನೌಕರರು (Scale: 27000-46675)ಗಳಿಗೆ ಗ್ರೂಪ್-ಡಿ (Scale:29600-52800) ವೃಂದಕ್ಕೆ ಮುಂಬಡ್ತಿ ನೀಡಲಾಗಿರುತ್ತದೆ.<br>HK:- ಅರಣ್ಯ ಭವನದ ಕಲ್ಯಾಣ ಕರ್ನಾಟಕ ಸ್ಥಳೀಯ ವೃಂದದ ದ್ವಿತೀಯ ದರ್ಜೆ ಸಹಾಯಕರುಗಳಿಗೆ ದಿನಾಂಕ:02.07.2024 ರಂದು ನಡೆದ ಅರಣ್ಯ ಇಲಾಖೆಯಲ್ಲಿ ರಾಜ್ಯ ಮಟ್ಟದ ಉಳಿಕೆ ಮೂಲ ವೃಂದದ ಮುಂಬಡ್ತಿ ಸಮಿತಿ ಸಭೆಯಲ್ಲಿನ ತೀರ್ಮಾನದನ್ವಯ, ಯಾವ ಅರ್ಹ ಗ್ರೂಪ್-ಡಿ (Scale: 27000-46675) ನೌಕರರುಗಳು ಲಭ್ಯವಿಲ್ಲರುವುದಿಲ್ಲವಾದರಿಂದ ಮುಂಬಡ್ತಿಗೆ ಪರಿಗಣಿಸಿರುವುದಿಲ್ಲ. |
| 48 | Butlers | ಗ್ರೂಪ್ 'ಡಿ' ಖಾಲಿ ಹುದ್ದೆಗಳ ಪೈಕಿ ಹೊರಗುತ್ತಿಗೆ ಆಧಾರದ ಮೇಲೆ ಭರ್ತಿ ಮಾಡಲಾಗಿದೆ. |
| 49 | Caretaker of Forest Lodges, Tindal, Ward Boy, Laskar, Female Ward Servant, Sweeper, Scavenger, Cooli, Mali, Dalayath, Gardener, Cleaner, Watchman | ವೃಂದ ಮತ್ತು ನೇಮಕಾತಿ ನಿಯಮಗಳನ್ವಯ ಸದರಿ ಹುದ್ದೆಯನ್ನು 100% ನೇರ ನೇಮಕಾತಿ ಮೂಲಕ ಭರ್ತಿ ಮಾಡಬೇಕಾಗಿರುತ್ತದೆ.ನೇರ ನೇಮಕಾತಿ (DR):- ಹೊರಗುತ್ತಿಗೆ ಮೂಲಕ ಭರ್ತಿ ಮಾಡಲಾಗಿದೆ. |